## ಬಾಲೆಗೆ ಬೆನ್ನು ತಟ್ಟಿ

ದಿನಾಂಕ 18.9.16 ರಂದು ಝೀ ಕನ್ನಡ ವಾಹಿನಿಯಲ್ಲಿ ಸಂಜೆ 7 ಗಂಟೆಗೆ ಸರೇಗಮಪ ಲಿಟ್ಲ್ ಚಾಂಪ್ಸ್ ಕಾರ್ಯಕ್ರಮಕ್ಕಾಗಿ 30 ಸ್ಪರ್ಧಿಗಳ ಆಯ್ಕೆ ನಡೆಯುತ್ತಿತ್ತು. ಅದರಲ್ಲಿ ನಾಗರಹೊಳೆಯ ಬುಡಕಟ್ಟು ಜನಾಂಗದ ಬಾಲಕಿಯೊಬ್ಬಳು ಸ್ಪರ್ಧಿಯಾಗಿದ್ದಳು. ಆ ಬಾಲಕಿಯನ್ನು ನಿರೂಪಕಿ 'ನೀನು ಈ ಮೊದಲು ಬೆಂಗಳೂರಿಗೆ ಬಂದಿದ್ದೀಯಾ? ಬೆಂಗಳೂರು ನೋಡಿದ್ದೀಯಾ ?' ಎಂದು ಪ್ರಶ್ನಿಸಿದರು. ಅವರಿಗೆ ಬುಡಕಟ್ಟು ಜನಾಂಗದವರ ಪರಿಸ್ಥಿತಿಯ ಬಗ್ಗೆ ಗೊತ್ತಿಲ್ಲ. ಹೆಚ್ಚಿನವರಿಗೆ ಅಲ್ಲಿ ವಾಸಕ್ಕೆ ಮನೆಗಳಿಲ್ಲ, ವಿದ್ಯುತ್ ವ್ಯವಸ್ಥೆ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಸದಾ ಆನೆಗಳ ಕಾಟ. ಇಂತಹ ಸ್ಥಿತಿಯಲ್ಲಿ ಇರುವ ಅವರು ಬೆಂಗಳೂರಿಗೆ ಬರುವುದು ಸಾಧ್ಯವೇ?

ನಿರೂಪಕಿಯಾದವರು ಆ ವಯಸ್ಸಿಗೆ ಬೆಂಗಳೂರಿಗೆ ಬಂದಿದ್ದರೋ ಇಲ್ಲವೋ ಗೊತ್ತಿಲ್ಲ. ಇನ್ನು ತೀರ್ಪುಗಾರರಾದ ವಿಜಯ ಪ್ರಕಾಶ್ ಅವರು ದೊಡ್ಡ ಸಾಧಕರಿರಬಹುದು. ಅವರ ಮಾತಿನ ಪ್ರಕಾರ ನಾಗರ ಹೊಳೆಯಂತಹ ಊರಿಗೆ ಝೀ ವಾಹಿನಿಯವರು ಹೋಗಿ ಆಡಿಷನ್ ಮಾಡಿರುವುದು ದೊಡ್ಡ ಸಾಧನೆ ಎನ್ನುವಂತೆ ಮಾತನಾಡಿದರು. ಅವರೇನೂ ಕಾಲ್ನಡಿಗೆಯಲ್ಲಿ ಹೋಗಿರಲಿಲ್ಲವಲ್ಲ. ವಾಹನದಲ್ಲಿ ಹೋಗಿರುವುದು ತಾನೇ. 'ನೀನು ಈ ವೇದಿಕೆಗೆ ಬಂದಿರುವುದೇ ದೊಡ್ಡ ಸಾಧನೆ' ಎಂದರು. ಇನ್ನು ರಾಜೇಶ್ ಕೃಷ್ಣನ್‌ನವರು ಒಂದು ತರಹದ ಅಸಡ್ಡೆಯ ನಗೆಯೊಂದಿಗೆ ಕೂತಿದ್ದರು. ಅವರಲ್ಲಿ ಅರ್ಜುನ ಜನ್ಯ ಅವರೊಬ್ಬರೇ ಒಳ್ಳೆಯ ಮಾತನಾಡಿ ಸಹಾಯ ಮಾಡುವುದಾಗಿ ಆ ಬಾಲಕಿಗೆ ಆಶ್ವಾಸನೆ ನೀಡಿದರು. ಇಂತಹ ಕಾಡಿನ ಮಕ್ಕಳನ್ನು ಆಯ್ಕೆ ಮಾಡಿ ಅವರಿಗೆ ತರಬೇತಿ ನೀಡಿ ಹಾಡಿಸಿದರೆ ಝೀ ಟಿವಿಯ ವೇದಿಕೆಗೆ ಒಂದು ಶೋಭೆ ಬರುತ್ತದೆ.

ಅಮ್ಮವನ ವಸುಂಧರಾ ಲಕ್ಷ್ಮಣ, ಕುಶಾಲನಗರ

## ಕೃತಕ ಸಂಬೋಧನೆ ಬೇಡ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಲು ಚಿಕ್ಕ ಮಕ್ಕಳಿಗೂ ಅವಕಾಶ ನೀಡಿರುವುದು ಒಳ್ಳೆಯದು. ಆದರೆ ನಿರೂಪಕರು ಇಂತಹ ಪುಟ್ಟ ಮಕ್ಕಳನ್ನು ಸಂಬೋಧಿಸುವಾಗ ಅಸಹಜವಾದ ಧಾಟಿಯಲ್ಲಿ ಬಹುವಚನವನ್ನು ಪ್ರಯೋಗಿಸುತ್ತಾರೆ. ಒಬ್ಬೊಬ್ಬರನ್ನೂ ಮಾತನಾಡಿಸುವಾಗ 'ನೀವು', 'ತಾವು' 'ತಮಗೆ ಅಭಿನಂದನೆಗಳು' ಎಂದು ಪದ ಪ್ರಯೋಗಗಳನ್ನು ಮಾಡುತ್ತಾರೆ. ಇದು ಮಕ್ಕಳ ಜೊತೆ ಕೃತಕ ಸಂವಾದ ಅನ್ನಿಸುತ್ತದೆ. ಹಾಗಾಗಿ ಮಕ್ಕಳನ್ನು ಆತ್ಮೀಯ ನೆಲೆಯ ಏಕ ವಚನದಲ್ಲಿ ಸಂಬೋಧಿಸಲಿ. ಇದರಿಂದ ಕಾರ್ಯಕ್ರಮದ ಶೋಭೆ ಇನ್ನೂ ಹೆಚ್ಚುತ್ತದೆ.

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

**ವಾರದ ಪತ್ರ**

### ವಿಜ್ಞಾನಕ್ಕೂ ಮಸಿ

ಸುವರ್ಣ ನ್ಯೂಸ್ ವಾಹಿನಿಯಲ್ಲಿ 'ನಾಗಮಣಿ'ಯ ಬಗ್ಗೆ ಒಂದು ಚರ್ಚೆ ಇತ್ತು. ಅದರಲ್ಲಿ ಮುಕ್ತಿನಾಗ ದೇವಸ್ಥಾನದ ಮುಖ್ಯಸ್ಥರು ಮತ್ತು ಉರಗಗಳ ಬಗ್ಗೆ ವೈಜ್ಞಾನಿಕವಾಗಿ ತಿಳಿದುಕೊಂಡಿರುವ ಮತ್ತು ಅವುಗಳ ಒಡನಾಟದಲ್ಲಿ ಇರುವ ಇಬ್ಬರು ಉರಗ ತಜ್ಞರು ಭಾಗವಹಿಸಿದ್ದರು. ಮಧ್ಯದಲ್ಲಿ ನರೇಂದ್ರ ಶರ್ಮ (ಬ್ರಹ್ಮಾಂಡ ಗುರೂಜಿ) ರವರು ದೂರವಾಣಿಯಲ್ಲಿ ಮಾತನಾಡಿದರು.

ನಾಗಮಣಿ ಇದೆ. ನಾಗರ ಹಾವು ಕಚ್ಚಿದಾಗ ನಾಗಮಣಿಯ ಸ್ಪರ್ಶದಿಂದ ವಿಷ ಹೀರಲ್ಪಟ್ಟು ಜೀವಾಪಾಯದಿಂದ ತಪ್ಪಿಸಿಕೊಳ್ಳಬಹುದು ಎಂಬುದು ಇಬ್ಬರು ಗುರೂಜಿಗಳ ಅಭಿಪ್ರಾಯವಾಗಿತ್ತು. ಆದರೆ ಉರಗತಜ್ಞರಿಬ್ಬರೂ ಸಹ 'ವೈಜ್ಞಾನಿಕವಾಗಿ ಅದು ಸುಳ್ಳು. ನಾಗಮಣಿ ಇರುವುದು ಸಾಧ್ಯವೇ ಇಲ್ಲ. ಜನರಿಗೆ ಹಣದಾಸೆಗಾಗಿ ವಂಚಕರು ಹೀಗೆ ಮೋಸ ಮಾಡುತ್ತಾರೆ' ಎಂಬುದನ್ನು ಬಹಳ ಚೆನ್ನಾಗಿ ನಿರೂಪಣೆ ಮಾಡಿದರು. ಕೊನೆಯಲ್ಲಿ ಹಾವಿನ ವಿಷಕ್ಕೆ ಯಾವ ಚಿಕಿತ್ಸೆ, ಎಷ್ಟು ಚುಚ್ಚು ಮದ್ದುಗಳನ್ನು ಕೊಡುತ್ತಾರೆ, ವೆಚ್ಚ ಎಷ್ಟಾಗಬಹುದು ಎಲ್ಲವನ್ನೂ ತಿಳಿಸಿದರು.

ಆದರೆ ಗುರೂಜಿಗಳಿಬ್ಬರೂ ಉರಗ ತಜ್ಞರ ವೈಜ್ಞಾನಿಕ ಜ್ಞಾನವನ್ನು ತಿಳಿಯುವ ಪ್ರಯತ್ನವನ್ನೇ ಮಾಡಲಿಲ್ಲ. ಇದು ಸರಿಯಾ?

ಕಲಾಮೂರ್ತಿ, ಬೆಂಗಳೂರು

## ತರಕಾರಿಗೂ ನಕ್ಷತ್ರ!

ಟಿ.ವಿ. ವಾಹಿನಿಗಳಲ್ಲಿ ಜ್ಯೋತಿಷಿಗಳ ತರ್ಕವಿಲ್ಲದ ವಿಚಾರಗಳು ವಿಚಿತ್ರವೆನಿಸುತ್ತವೆ. ಇಂತಿಂತಹ ನಕ್ಷತ್ರದವರು ಇಂತಹವೇ ತರಕಾರಿಗಳನ್ನು ತಿನ್ನಬೇಕು ಎನ್ನುತ್ತಿದ್ದಾರೆ. ಸುಮ್ಮನೆ ಅಮಾಯಕರಲ್ಲಿ ಬಟ್ಟೆ ಹಾವುಗಳನ್ನು ತಟ್ಟೆಯಲ್ಲಿಟ್ಟು ಹೆದರಿಸುತ್ತಿದ್ದೀರಲ್ಲ. ಸಾಕು ಮಾಡಿ ಸ್ವಾಮಿ.

ಎಚ್. ಆನಂದ್ ಕುಮಾರ್, ಚಿತ್ರದುರ್ಗ

## ಅಸ್ಪಷ್ಟ

'ಹರ ಹರ ಮಹಾದೇವ' ಧಾರಾವಾಹಿಯಲ್ಲಿ ಶಿವನು ಚಂದ್ರನನ್ನು ಧರಿಸಿದ ದಿನವನ್ನು 'ಶಿವರಾತ್ರಿ'ಯಾಗಿ ಆಚರಿಸುವಂತೆ ಹಿನ್ನೆಲೆ ಧ್ವನಿಯಲ್ಲಿ ಕೇಳಿಸಲಾಯಿತು. ಇದು ಯಾವ ಪುರಾಣದಲ್ಲಿದೆ?

ಪುರಾಣದ ಪ್ರಕಾರ ಶಿವನು ವಿಷ ಕುಡಿದ ದಿನವನ್ನು ಶಿವರಾತ್ರಿಯನ್ನಾಗಿ ಆಚರಿಸುತ್ತಾರೆ. ಇದಕ್ಕೆ ವೈಜ್ಞಾನಿಕ ಕಾರಣವೂ ಇದೆ. ವಿಷ ಕುಡಿದ ವ್ಯಕ್ತಿಯನ್ನು 24 ಗಂಟೆಗಳ ಕಾಲ ನಿದ್ರಿಸಲು ಬಿಡುವುದಿಲ್ಲ. ಇದರಿಂದ ವಿಷ ದೇಹವನ್ನು ವ್ಯಾಪಿಸುವುದಿಲ್ಲ. ವಿಷದ ತಾಪ ಶಮನಕ್ಕಾಗಿ ಎಳನೀರು, ಹಣ್ಣುಗಳನ್ನು ಸೇವಿಸಲು ಹೇಳುತ್ತಾರೆ. ಶಿವರಾತ್ರಿಯನ್ನು ಈ ಹಿನ್ನೆಲೆಯಲ್ಲಿ ಆಚರಿಸಲಾಗುತ್ತದೆ.

ಎಲ್. ಸ್ವರ್ಣಲತಾ, ಮೈಸೂರು

## ಕಾಪಿ ಕಥೆ

ಇತ್ತೀಚೆಗೆ ಟಿ. ವಿ. ಯಲ್ಲಿ ಚಾನೆಲ್‌ಗಳ ಸಂಖ್ಯೆ ಹೆಚ್ಚುತ್ತಿದೆ. ಚಾನೆಲ್‌ಗಳ ಸಂಖ್ಯೆ ಹೆಚ್ಚಿದಷ್ಟೂ ಪ್ರಸಾರವಾಗುವ ಕಾರ್ಯಕ್ರಮಗಳ ಗುಣಮಟ್ಟ ಕಳಪೆಯಾಗುತ್ತಿದೆ. ಒಂದು ಚಾನೆಲ್‌ನಲ್ಲಿ ಪ್ರಸಾರವಾಗುವ ಧಾರಾವಾಹಿಗಳು ಬೇರೆ ಬೇರೆ ಚಾನೆಲ್‌ನಲ್ಲಿ ಬೇರೆ ಬೇರೆ ಹೆಸರಿನಲ್ಲಿ ಪ್ರಸಾರವಾಗುತ್ತಿವೆ.

ಉದಾ: ಹರ ಹರ ಮಹಾದೇವ, 'ಗಿರಿಜಾ ಕಲ್ಯಾಣ', ದುರ್ಗಾ, ಮಹಾದೇವಿ, ಓಂ ಶಾಂತಿ ಇತ್ಯಾದಿ. ಅದೇ ಕಥೆಗಳು ಅದೇ ವಿಷಯ. ದ್ವೇಷ, ಅಸೂಯೆ, ಸೇಡು ತೀರಿಸಿಕೊಳ್ಳುವುದು, ಕೊಲೆ, ಹಿಂಸೆ (ವರ್ಷಾನುಗಟ್ಟಲೆ ಕತ್ತಲ ಕೋಣೆಯಲ್ಲಿ ಕೂಡಿ ಹಾಕುವುದು) ಬೇಸರವೆನಿಸುತ್ತದೆ. ಮಾಟ, ಮಂತ್ರ, ಭೂತ, ದೆವ್ವ ಕೂಡಾ ಇವೆ. ಜೊತೆಗೆ ಪ್ರತಿ ಚಾನೆಲ್‌ನಲ್ಲೂ ಜ್ಯೋತಿಷಿಗಳ ವೈಭೋಗ, ಮೆರವಣಿಗೆ, ಅವರ ಪ್ರಶಂಸೆ.

—ಲಕ್ಷ್ಮಿತಾಂಡವೇಶ್ವರ, ಮೈಸೂರು

## ಹೆಣ್ಣುಮಕ್ಕಳ ನೋವು

ಪ್ರತಿ ದಿನ ಸಂಜೆ 9.30ಕ್ಕೆ ಪ್ರಸಾರವಾಗುವ ಮನೆದೇವ್ರು ಧಾರಾವಾಹಿಯಲ್ಲಿ ಸೂರ್ಯ ಮತ್ತು ತಾಯಿ ರೋಹಿಣಿಯ ಪಾತ್ರಗಳು ತುಂಬಾ ಅತ್ಯುತ್ತಮವಾಗಿ ಮೂಡಿ ಬರುತ್ತಿದೆ. ಮನೆದೇವ್ರು ಧಾರಾವಾಹಿ ಕಥೆ ಸುಗಮವಾಗಿ ಸಾಗುತ್ತದೆ. ಮದುವೆಯ ವಯಸ್ಸಿಗೆ ಬಂದಿದ್ದರೂ ವರನ ಹುಡುಕಾಟದಲ್ಲಿ ತಾಯಿ ಮತ್ತು ಜಾನಕಿ ಅನುಭವಿಸುವ ನೋವು, ಅವಮಾನ, ಮನೆಮಂದಿಯ ಕಿರುಕುಳ ಎಲ್ಲವೂ ಇಂದಿನ ಸಮಾಜದಲ್ಲಿ ಹಲವಾರು ಹೆಣ್ಣು ಮಕ್ಕಳು ಮತ್ತು ಅವರ ತಾಯಂದಿರ ನೋವನ್ನು ಸೆರೆಹಿಡಿದಂತಿದೆ.

—ಪದ್ಮನಿ ಗುರುನಾಥ ಹೆಗಡೆ, ಬನ್ನೂರು

## ಎಡವಟ್ಟು

ಕಲರ್ಸ್ ಕನ್ನಡದಲ್ಲಿ 2016 ಅನುಬಂಧ ಅವಾರ್ಡ್ ತುಂಬಾ ಚೆನ್ನಾಗಿತ್ತು. ಅದರಲ್ಲೂ ಅತ್ಯುತ್ತಮ ಧಾರಾವಾಹಿ ಅಗ್ನಿ ಸಾಕ್ಷಿ ಎಂದಾಗ ಕುಣಿದಾಡುವಂತಾಯಿತು. ನಿಜವಾಗಲೂ ನಿರ್ದೇಶಕ ಸಿದ್ದು, ಸನ್ನಿಧಿ ಇವರ ನಟನೆ ತುಂಬಾ ಚೆನ್ನಾಗಿದೆ. ಪುಟ್ಟ ಗೌರಿ ಮದುವೆ ಇದುವರೆಗೆ ಚೆನ್ನಾಗಿತ್ತು. ಇದ್ದಕ್ಕಿದ್ದಂತೆ ಗೌರಿನ ಸಾಯಿಸೋದು ಅಂದ್ರೆ ಎಲ್ಲಾ ಎಡವಟ್ಟಾಗಿ ಹೋಯಿತು.

ಎ. ಶಾರದ, ಕೊಟ್ಟೂರು